## ನಿಮ್ಮೊಡನೆ

# ಈ ಸಾವು ನ್ಯಾಯವೆ?

ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ದುಡಿಯುತ್ತಿರುವ ಸಾವಿರಾರು ಕಾರ್ಮಿಕರಿಗೆ, ಸಂಘಟಿತ ವಲಯದ ಕಾರ್ಮಿಕರಿಗೆ ಸಿಗುವ ಯಾವ ಸೌಲಭ್ಯವೂ ಲಭಿಸುವುದಿಲ್ಲ. ಕಂಟ್ರಾಕ್ಟರರು ಮತ್ತು ಮಾಲೀಕರ ಹಣದ ದಾಹದಿಂದ ಅಕ್ರಮವಾಗಿ ಕಟ್ಟಲ್ಪಡುವ ಬಹುಮಹಡಿ ಕಟ್ಟಡಗಳಲ್ಲಿ ಸಾಯುವ ಕಾರ್ಮಿಕರ ಪ್ರಾಣಕ್ಕೆ ಸರಕಾರ ಕೂಡಾ ಕವಡೆ ಕಾಸಿನ ಬೆಲೆಯನ್ನೂ ನೀಡುತ್ತಿಲ್ಲ.

ನಿರ್ಮಾಣ ಹಂತದಲ್ಲಿರುವ ಅಕ್ರಮ ಬಹುಮಹಡಿ ಕಟ್ಟಡಗಳು ಕುಸಿಯುವುದು ಮತ್ತು ಅದರಡಿಯಲ್ಲಿ ಕೂಲಿ ಕಾರ್ಮಿಕರು ಸಿಕ್ಕಿ ಸಾಯುವುದು ನಡೆದೇ ಇದೆ. ಬೆಂಗಳೂರಿನಲ್ಲಿ ಕಳೆದ ವಾರ ಮತ್ತೆ ಇಂಥಹದ್ದೊಂದು ಘಟನೆ ನಡೆದು ಬಿಹಾರದ ಇಬ್ಬರು ಯುವಕರು ಹಾಗೂ ರಾಯಚೂರಿನ ಒಬ್ಬ ಮಹಿಳೆ ಮೃತಪಟ್ಟಿದ್ದಾರೆ. ಕೆಲವು ಸಮಯದ ಹಿಂದೆ ಬಳ್ಳಾರಿಯಲ್ಲೂ ಹೀಗೆಯೇ ಬಹುಮಹಡಿ ಕಟ್ಟಡ ಕುಸಿದು ಹಲವರು ಪ್ರಾಣ ಕಳೆದುಕೊಂಡಿದ್ದರು. ಬೆಂಗಳೂರಿನಲ್ಲಿ ಗಂಗಾರಾಮ್ ಕಟ್ಟಡ ದುರಂತದಿಂದ ಹಿಡಿದು ಕಳೆದ ವರ್ಷದ ಕಾರ್ಲ್‌ಟನ್ ಕಟ್ಟಡದ ಅಗ್ನಿ ದುರಂತದವರೆಗೆ ಹಲವು ಕಟ್ಟಡ ಕುಸಿತದ ಪ್ರಕರಣಗಳನ್ನು ಪಟ್ಟಿ ಮಾಡಬಹುದು. ಬಹುತೇಕ ದುರಂತಗಳಲ್ಲಿ ಪ್ರಾಣ ಕಳೆದುಕೊಂಡ ಕಾರ್ಮಿಕರ ಮಕ್ಕಳು ಅನಾಥವಾಗಿದ್ದಾರೆ.

ಬೆಂಗಳೂರಿನ ಕಟ್ಟಡ ನಿರ್ಮಾಣದ ಕಾಮಗಾರಿಗೆ ಈಗಲೂ ರಾಯಚೂರು, ಗುಲ್ಬರ್ಗ, ವಿಜಾಪುರ ಮುಂತಾದ ಅಭಿವೃದ್ಧಿಯಲ್ಲಿ ಹಿಂದುಳಿದ ಜಿಲ್ಲೆಗಳಿಂದಲೇ ಕಾರ್ಮಿಕರು ಹೆಚ್ಚಾಗಿ ಬರುತ್ತಿದ್ದಾರೆ. ಜತೆಗೆ ಬಿಹಾರ, ಜಾರ್ಖಂಡ್, ಒರಿಸ್ಸಾ ಮುಂತಾದ ರಾಜ್ಯಗಳ ಅತ್ಯಂತ ಹಿಂದುಳಿದ ಪ್ರದೇಶಗಳಿಂದಲೂ ವಲಸೆ ನಡೆದಿದೆ. ಹೊಟ್ಟೆಪಾಡಿಗಾಗಿ ದೂರದೂರದ ಊರುಗಳಿಂದ ಬಂದು ಯಾವುದೇ ಕೆಲಸದ ಭದ್ರತೆ ಇಲ್ಲದೆ ಕಟ್ಟಡ ನಿರ್ಮಾಣದಲ್ಲಿ ದುಡಿಯುವ ಕಾರ್ಮಿಕರ ಜೀವಕ್ಕೂ ಭದ್ರತೆ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ದುಡಿಯುತ್ತಿರುವ ಸಾವಿರಾರು ಕಾರ್ಮಿಕರಿಗೆ, ಸಂಘಟಿತ ವಲಯದ ಕಾರ್ಮಿಕರಿಗೆ ಸಿಗುವ ಯಾವ ಸೌಲಭ್ಯವೂ ಲಭಿಸುವುದಿಲ್ಲ. ಕಂಟ್ರಾಕ್ಟರರು ಮತ್ತು ಮಾಲೀಕರ ಹಣದ ದಾಹದಿಂದ ಅಕ್ರಮವಾಗಿ ಕಟ್ಟಲ್ಪಡುವ ಬಹುಮಹಡಿ ಕಟ್ಟಡಗಳಲ್ಲಿ ಸಾಯುವ ಕಾರ್ಮಿಕರ ಪ್ರಾಣಕ್ಕೆ ಸರಕಾರ ಕೂಡಾ ಕವಡೆ ಕಾಸಿನ ಬೆಲೆಯನ್ನೂ ನೀಡುತ್ತಿಲ್ಲ. ಈ ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿ ಗತಿ ಸುಧಾರಣೆಗೆ ಸರಕಾರದ ಮಟ್ಟದಲ್ಲಿ ಪ್ರಯತ್ನಗಳು ನಡೆದಿದ್ದರೂ, ಕಟ್ಟಡಗಳ ಮಾಲೀಕರು ಕಾನೂನಿಗೇ ಚಳ್ಳೆಹಣ್ಣು ತಿನ್ನಿಸುವುದರಲ್ಲಿ ನಿಷ್ಣಾತರಾಗಿದ್ದಾರೆ. ಅಕ್ರಮ ಕಟ್ಟಡಗಳು ಕುಸಿದು ಕಾರ್ಮಿಕರು ಸಾವನ್ನಪ್ಪಿದ ಯಾವ ಪ್ರಕರಣಗಳಲ್ಲಿ ಕಟ್ಟಡಗಳ ಮಾಲೀಕರಿಗೆ, ಕಂಟ್ರಾಕ್ಟರರಿಗೆ ಶಿಕ್ಷೆಯಾಗಿದೆ ಎನ್ನುವುದರ ಲೆಕ್ಕ ತೆಗೆದರೆ ಈ ಅಂಶ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಹೀಗೆ ಕಟ್ಟಡ ಕುಸಿತದಲ್ಲಿ ಸಾಯುವವರು ತೀರಾ ಹಿಂದುಳಿದ ವರ್ಗಗಳ ಬಡವರೇ ಆಗಿರುವುದರಿಂದ ವ್ಯವಸ್ಥೆಯ ವಿರುದ್ಧ ಹೋರಾಡಿ ನ್ಯಾಯ ಪಡೆಯುವ ಶಕ್ತಿಯೂ ಅವರಿಗೆ ಇರುವುದಿಲ್ಲ.

ಕಳಪೆ ಸಾಮಗ್ರಿಗಳ ಬಳಕೆ ಮತ್ತು ನಿಯಮ ಉಲ್ಲಂಘನೆಯೇ ಅಕ್ರಮ ಕಟ್ಟಡಗಳ ಕುಸಿತಕ್ಕೆ ಕಾರಣ. ಕಾರ್ಮಿಕರ ಪ್ರಾಣಹಾನಿಯ ಪ್ರಕರಣಗಳು ಆಗಾಗ್ಗೆ ನಡೆಯುತ್ತಿದ್ದರೂ, ಅಕ್ರಮ ಕಟ್ಟಡ ನಿರ್ಮಾಣಗಳನ್ನು ತಡೆಯುವ ಗಂಭೀರ ಪ್ರಯತ್ನಗಳು ಆಗುತ್ತಿಲ್ಲ. ಬಹುತೇಕ ಕಟ್ಟಡ ನಿರ್ಮಾಣದ ಅಕ್ರಮಗಳಲ್ಲಿ ಮಹಾನಗರಪಾಲಿಕೆಯ ಸದಸ್ಯರು ಮತ್ತು ಅಧಿಕಾರಿಗಳೂ ಪಾಲುದಾರರಾಗಿರುತ್ತಾರೆ. ಅಕ್ರಮ ಕಟ್ಟಡಗಳ ರಕ್ಷಣೆಗೆ ಲಂಚ ಬೇಡಿ ಜೈಲಿಗೆ ಹೋಗಿ ಬಂದ ಪಾಲಿಕೆ ಸದಸ್ಯರೂ ಬೆಂಗಳೂರಿನಲ್ಲಿ ಇದ್ದಾರೆ ಎನ್ನುವುದು ಗಂಭೀರ ಸಂಗತಿ.

ಮೂರು ಮಹಡಿಗೆ ಅನುಮತಿ ಪಡೆದು ಆರು ಮಹಡಿಗಳನ್ನು ನಿರ್ಮಿಸುವುದು, ಮಂಜೂರಾದ ನಕ್ಷೆಯನ್ನು ಪೂರ್ಣವಾಗಿ ಉಲ್ಲಂಘಿಸಿ ಮನಬಂದಂತೆ ಕಟ್ಟಡಗಳನ್ನು ನಿರ್ಮಿಸುವುದು, ಕೆರೆಯ ಪ್ರದೇಶವನ್ನು ಅತಿಕ್ರಮಿಸಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುವುದು– ಹೀಗೆ ವ್ಯಾಪಕ ಉಲ್ಲಂಘನೆಯ ಪ್ರಕರಣಗಳು ಬೆಂಗಳೂರಿನಲ್ಲಿ ವರದಿಯಾಗುತ್ತಿವೆ. ಸಮೂಹ ಮಾಧ್ಯಮಗಳ ಒತ್ತಡ ಹೆಚ್ಚಾದಾಗ ಕೆಲವು ಪ್ರಕರಣಗಳಲ್ಲಿ ಲಂಚಕೋರ ಅಧಿಕಾರಿಗಳನ್ನು ಅಮಾನತು ಮಾಡಿದರೂ, ಕೆಲವೇ ಸಮಯದಲ್ಲಿ ಆ ಅಧಿಕಾರಿಗಳು ಮತ್ತೆ ಅದೇ ಹುದ್ದೆಯಲ್ಲಿ ಅಥವಾ ಭಡ್ತಿ ಪಡೆದು ಮುಂದುವರಿಯುತ್ತಾರೆ. ಮಾಲೀಕರು, ಕಂಟ್ರಾಕ್ಟರರು, ಜನಪ್ರತಿನಿಧಿಗಳ ಈ ಲಾಭಕೋರತನದ ದಂಧೆಗೆ ಅಮಾಯಕ ಕಾರ್ಮಿಕರು ಹೆಣವಾಗುತ್ತಾರೆ. ರಾಜ್ಯ ಸರಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕಾರ್ಮಿಕರ ಜೀವಭದ್ರತೆಗೆ ಆದ್ಯ ಗಮನ ಹರಿಸುವ ಅಗತ್ಯವಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಒದಗಿಸಲು ಹಾಗೂ ವಿಮಾ ಸೌಲಭ್ಯವನ್ನು ಜಾರಿಗೆ ತರಲು ಕಟ್ಟುನಿಟ್ಟಿನ ಕಾನೂನು ಜಾರಿಗೆ ಬರಬೇಕಿದೆ. ತಪ್ಪಿತಸ್ಥರನ್ನು ಯಾವುದೇ ಮುಲಾಜಿಲ್ಲದೆ ಶಿಕ್ಷೆಗೆ ಗುರಿಪಡಿಸುವ ಕೆಲಸವೂ ನಡೆಯಬೇಕಿದೆ.

■ ಬಿ.ಎಂ.ಹನೀಫ್



ಈಶ್ವರ